## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಡಾ॥ ವೈ.ಎ.ನಾರಾಯಣಸ್ವಾಮಿ ಇವರು ನಿಯಮ 72 ರಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಮಾನ್ಯ ಉಪ ಮುಖ್ಯಮಂತ್ರಿಯವರ ಹೇಳಿಕೆ.

ಪ್ರಶ್ನೆ:-

ಕರ್ನಾಟಕ ಸರ್ಕಾರದ ವ್ಯಾಪ್ತಿಯಲ್ಲಿ ಬರುವ ಬೆಂಗಳೂರು ನಗರ ಅಭಿವೃದ್ಧಿ ಪ್ರಾಧಿಕಾರ (ಬಿ.ಡಿ.ಎ) ಗೆ ಸರ್ಕಾರಿ ವಕೀಲರನ್ನು ನೇಮಿಸುವಾಗ ಯಾವುದೇ ಅರ್ಹತಾ ಪರೀಕ್ಷೆ ಇಲ್ಲದೆ, ಯಾವುದೇ ಮಾನದಂಡಗಳನ್ನು ರೂಪಿಸದೇ ಹಾಗೂ ಅನುಸರಿಸದೇ ನೇಮಕ ಮಾಡಿಕೊಳ್ಳುತ್ತಿರುವುದರಿಂದ ಮೇಲ್ಕಂಡ ಸಂಸ್ಥೆಗಳಿಗೆ ನ್ಯಾಯಾಲಯಗಳಲ್ಲಿ ಬಹಳ ಹಿನ್ನಡೆಯಾಗುತ್ತಿರುವ ಕುರಿತು.

ಉತ್ತರ:-

ಮಾನ್ಯ ನ್ಯಾಯಾಲಯಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಿರುದ್ಧ ದಾಖಲಾಗುವ ಪ್ರಕರಣಗಳಲ್ಲಿ ಪ್ರಾಧಿಕಾರವನ್ನು ಪ್ರತಿನಿಧಿಸಲು ಖಾಸಗಿ ವಕೀಲರನ್ನು ಪ್ರಾಧಿಕಾರವು ನಿಗದಿಪಡಿಸಿರುವ ಶುಲ್ಕವನ್ನು ಪಾವತಿಸುವ ಷರತ್ತಿಗೊಳಪಟ್ಟು ಪ್ರಾಧಿಕಾರದ ವಕೀಲರ ತಂಡದಲ್ಲಿ ಸೇರ್ಪಡಿಸಿಕೊಂಡಿದೆ. ಪ್ರಸ್ತುತ ಮಾನ್ಯ ಉಚ್ಚ ನ್ಯಾಯಾಲಯದ ಪ್ರಕರಣಗಳಿಗೆ ಸಂಬಂಧಿಸಿದಂತೆ 48 ವಕೀಲರು ಹಾಗೂ ಸಿವಿಲ್ ಮತ್ತು ಇತರೆ ನ್ಯಾಯಾಲಯಗಳಿಗೆ ಸಂಬಂಧಿಸಿದಂತೆ ಪ್ರಾಧಿಕಾರವನ್ನು ಪ್ರತಿನಿಧಿಸಲು 43 ವಕೀಲರು ಇರುತ್ತಾರೆ.

- ಈ ವಕೀಲರನ್ನು ನೇಮಿಸುವಾಗ ಕಾನೂನು ವಿದ್ಯಾರ್ಹತೆಯೊಂದಿಗೆ ಕನಿಷ್ಠ 5 ವರ್ಷಗಳ ವಕೀಲ ವೃತ್ತಿಯಲ್ಲಿ ಅನುಭವ ಹಾಗೂ ಸೇವಾ ಹಿರಿತನವನ್ನು ಪರಿಗಣಿಸಲಾಗುತ್ತದೆ. ಈ ವಕೀಲರುಗಳು ಪ್ರಾಧಿಕಾರದ ವಿರುದ್ಧ ದಾಖಲಾಗುವ ಪ್ರಕರಣಗಳಲ್ಲಿ ಖಾಸಗಿಯಾಗಿ ಪ್ರತಿನಿಧಿಸದಂತೆ ನಿರ್ಬಂಧ ಹೇರಲಾಗಿದೆ ಹಾಗೂ ಕೆಳಕಂಡ ಷರತ್ತುಗಳನ್ನು ವಿಧಿಸಲಾಗಿದೆ.
    1. ಪ್ರಾಧಿಕಾರಕ್ಕೆ ಸಂಬಂಧಿಸಿದ ಕೆಲಸಗಳನ್ನು ಜವಾಬ್ದಾರಿಯಿಂದ ಹಾಗೂ ಶ್ರದ್ಧೆಯಿಂದ ನಿರ್ವಹಿಸತಕ್ಕದ್ದು.
    2. ಕಛೇರಿಯಿಂದ ನ್ಯಾಯಾಲಯಕ್ಕೆ ಸಲ್ಲಿಸಲ್ಪಡುವ ಕಂಡಿಕೆವಾರು ಷರಾಗಳ ಆಧಾರದ ಮೇಲೆ (Statement of Objection) ಗಳನ್ನು ತಯಾರಿಸಿ ದಾಖಲು ಮಾಡುವ ಪೂರ್ವದಲ್ಲಿ ಸಂಬಂಧಪಟ್ಟ ಪ್ರಾಧಿಕಾರದ ಘಟಕಾಧಿಕಾರಿಯವರಿಗೆ ತೋರಿಸತಕ್ಕದ್ದು.
    3. ಯಾವುದೇ ಕಾರಣಕ್ಕೂ ಪ್ರಾಧಿಕಾರದ ನೌಕರ/ಅಧಿಕಾರಿ ಇವರನ್ನು ವ್ಯಾಜ್ಯಕ್ಕೆ ಸಂಬಂಧಿಸಿದ ವಿಷಯಕ್ಕೆ ಸಂಬಂಧಿಸಿದಂತೆ ವಕೀಲರೇ ಖುದ್ದಾಗಿ ಪ್ರಾಧಿಕಾರದ ಘಟಕಾಧಿಕಾರಿಯವರನ್ನು ಸಂಪರ್ಕಿಸತಕ್ಕದ್ದು.
    4. ಯಾವುದೇ ಕಡತ/ದಾಖಲೆಗಳನ್ನು ನ್ಯಾಯಾಲಯಕ್ಕೆ ಒದಗಿಸಬೇಕಾದ ಸಂದರ್ಭದಲ್ಲಿ ವಕೀಲರುಗಳು ನೇರವಾಗಿ ಘಟಕಾಧಿಕಾರಿಗಳವರಿಗೆ ಲಿಖಿತ ಮೂಲಕ ದಾವೆ ಸಂಖ್ಯೆ ಇತರೆಗಳನ್ನು ನಮೂದಿಸಿ ಮೂಲ ಕಡತವನ್ನು ಸ್ವೀಕೃತಿಯೊಂದಿಗೆ ಪಡೆಯತಕ್ಕದ್ದು.

..2ಕ್ಕೆ

5. ಪ್ರಾಧಿಕಾರದ ನೌಕರ/ಅಧಿಕಾರಿ ಇವರುಗಳು ಕಡತ/ದಾಖಲೆಗಳು ವಕೀಲರಿಗೆ ನೀಡುವಲ್ಲಿ ವಿಳಂಬ ಮಾಡಿದಲ್ಲಿ ನೇರವಾಗಿ ಆಯುಕ್ತರವರಿಗೆ ಲಿಖಿತ ಮೂಲಕ ತಿಳಿಸತಕ್ಕದ್ದು.
6. ಕಾನೂನು ವ್ಯಾಜ್ಯಗಳ ನಿರ್ವಹಣೆಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಹಿತಾಸಕ್ತಿಯನ್ನು ತಪ್ಪದೇ ಕಾಪಾಡುವುದು.
7. ನ್ಯಾಯಾಲಯವು ಆದೇಶ ಹೊರಡಿಸಿದ ತೀರ್ಪಿನ ಪ್ರತಿಗಳನ್ನು ಘನ ನ್ಯಾಯಾಧೀಶರುಗಳು ಸಹಿ ಮಾಡಿದ ಕೂಡಲೇ, ಅಂದರೆ ನಿಗಧಿತ ಅವಧಿಯೊಳಗೆ ಧೃಢೀಕೃತ ಪ್ರತಿಗಳನ್ನು ಪ್ರಾಧಿಕಾರದ ಕಾನೂನು ವಿಭಾಗ/ಸಂಬಂಧಪಟ್ಟ ಶಾಖೆಗೆ ಸಲ್ಲಿಸತಕ್ಕದ್ದು.
8. ಸೂಚನೆಗಳನ್ನು ಪಾಲಿಸಲು ತಪ್ಪಿದಲ್ಲಿ ಪ್ರಾಧಿಕಾರದ ಪ್ಯಾನಲ್ ನಿಂದ ತಮ್ಮ ಹೆಸರನ್ನು ತನ್ನಷ್ಟಕ್ಕೆ ತಾನೇ ರದ್ದಾಗಿದೆಯೆಂದು ತಿಳಿಯತಕ್ಕದ್ದು.

- ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಹಾಗೂ ದುರ್ನಡತೆ ತೋರಿದಲ್ಲಿ ಅಥವಾ ಆಡಳಿತಾತ್ಮಕ ಕಾರಣಗಳಿಗಾಗಿ ಅವರ ಹೆಸರನ್ನು ಪ್ರಾಧಿಕಾರದ ವಕೀಲರ ತಂಡದ ಪಟ್ಟಿಯಿಂದ ತೆಗೆದುಹಾಕುವ ಹಕ್ಕನ್ನು ಪ್ರಾಧಿಕಾರವು ಹೊಂದಿದೆ.
- ಕೆಲವೊಂದು ಕಾನೂನು ಅಂಶಗಳನ್ನು ಒಳಗೊಂಡ ಸಂಕೀರ್ಣ ಮತ್ತು ಗಂಭೀರವಾದ ಪ್ರಕರಣಗಳಲ್ಲಿ ಪ್ರಾಧಿಕಾರದ ಹಿತಾಸಕ್ತಿಯನ್ನು ಸಮರ್ಥಿಸಲು ನುರಿತ ಹಿರಿಯ ವಕೀಲರ ಸೇವೆಯನ್ನು ಸಂದರ್ಭಾನುಸಾರ ಪಡೆದುಕೊಳ್ಳಲಾಗುತ್ತಿದೆ. ಪ್ರಾಧಿಕಾರದ ವಕೀಲರ ತಂಡವನ್ನು ಸಂದರ್ಭಾನುಸಾರ ಮತ್ತು ಅಗತ್ಯಕ್ಕನುಗುಣವಾಗಿ ಕಾಲಕಾಲಕ್ಕೆ ಪರಿಷ್ಕರಿಸಲಾಗುತ್ತಿದೆ.

---

ನಅಇ 135 ಬೆಂಅಸೇ 2023(ಇ)

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ